ತಕ್ಷಣ ಬಿಡುಗಡೆಗಾಗಿ

# ವಿಶ್ವ ಬ್ಯಾಂಕ್

ಪತ್ರಿಕಾ ಹೇಳಿಕೆ ಸಂ. 2006//SAR


ಸಂಪರ್ಕಗಳು:

ದೆಹಲಿಯಲ್ಲಿ

ಸುದೀಪ್ ಮುಜುಮ್‌ದಾರ್

(9111) 2461–7241

smozumder@worldbank.org

ವಾಷಿಂಗ್‌ಟನ್‌ನಲ್ಲಿ

ಎರಿಕ್ ನೋರಾ

(202) 458–4735

enora@worldbank.org


## ಹಿಮಾಚಲ ಪ್ರದೇಶದಲ್ಲಿ ಜಲಾನಯನಪ್ರದೇಶಾಭಿವೃದ್ಧಿಗೆ ವಿಶ್ವಬ್ಯಾಂಕ್‌ನಿಂದ ಯುಎಸ್$60 ಮಿಲಿಯಗಳ ನೆರವು

-ಸಮಗ್ರ ಜಲಾನಯನ ಅಭಿವೃದ್ಧಿ ಯೋಜನೆ(ಐಡಬ್ಲ್ಯುಡಿಪಿ)ಯ ಯಶಸ್ವಿನ ಅನುಭವದ ಆಧಾರದಲ್ಲಿ ಅನುಷ್ಠಾನಿಸಲು–

ವಾಷಿಂಗ್‌ಟನ್, ಡಿಸೆಂಬರ್ 13, 2005– ಹಿಮಾಚಲ ಪ್ರದೇಶದ ಮಧ್ಯ–ಹಿಮಾಲಯ ಜಲಾನಯನ ಅಭಿವೃದ್ಧಿ ಯೋಜನೆಗೆ ಯುಎಸ್$60 ಮಿಲಿಯಗಳ ಸಾಲ ನೀಡಲು ವಿಶ್ವಬ್ಯಾಂಕ್ ಇಂದು ಸಮ್ಮತಿಸಿತು. ಹಿಮಾಚಲ ಪ್ರದೇಶ ಸರಕಾರಕ್ಕೆ ತನ್ನ ಪ್ರಾಕೃತಿಕ ಸಂಪನ್ಮೂಲಗಳ ವಿನಾಶವನ್ನು ಹತ್ತಿಕ್ಕಲು, ನೈಸರ್ಗಿಕ ಸಂಪನ್ಮೂಲಗಳ ಉತ್ಪಾದಕ ಸಾಮರ್ಥ್ಯವನ್ನು ಹೆಚ್ಚಿಸಲು, ಹಾಗೂ ಗ್ರಾಮೀಣ ಉತ್ಪಾದಕತೆಯನ್ನು ವೃದ್ಧಿಸಲು ಸಹಾಯವಾಗುವಂತೆ ಈ ಯೋಜನೆಯನ್ನು ವಿನ್ಯಾಸಗೊಳಿಸಲಾಗಿದೆ.

ಪ್ರವಾಸೋದ್ಯಮ ಹಾಗೂ ಜಲವಿದ್ಯುತ್ ಕ್ಷೇತ್ರಗಳ ಹೆಚ್ಚುತ್ತಿರುವ ಪ್ರಾಮುಖ್ಯತೆಯ ಹೊರತಾಗಿಯೂ, ಹಿಮಾಚಲ ಪ್ರದೇಶದ ಆರ್ಥಿಕತೆಯು ಹೆಚ್ಚಾಗಿ ಕೃಷಿ ಆಧಾರಿತವಾಗಿದೆ. ಹತ್ತರಲ್ಲಿ ಒಂಭತ್ತು ಕುಟುಂಬಗಳೂ ಗ್ರಾಮೀಣ ಪ್ರದೇಶಗಳಲ್ಲಿವೆ, ಹಾಗೂ ಇವುಗಳಲ್ಲಿ ಹೆಚ್ಚಿನವು ದೂರದ ಕಣಿವೆಗಳಲ್ಲಿ, ಚಿಕ್ಕ ಚಿಕ್ಕ ಮನೆಗಳಲ್ಲಿ ವಾಸಿಸುತ್ತವೆ. ರಾಜ್ಯದ ಒಟ್ಟು ಜನಸಂಖ್ಯೆಯ ಸುಮಾರು ಶೇ 28ರಷ್ಟು ಜನರು ಬಡತನ ರೇಖೆಗಿಂತ ಕೆಳಗೆ ಜೀವಿಸುತ್ತಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಅಭಿವೃದ್ಧಿ ಸಾಧಿಸಲು ಇರುವ ಅಡಚಣೆಗಳಲ್ಲಿ ಹಳ್ಳದಿಣ್ಣೆಗಳಿಂದ ಕೂಡಿದ ಭೂಲಕ್ಷಣಗಳು ಹಾಗೂ ಸಾಮಾಜಿಕ ಮತ್ತು ಆರ್ಥಿಕ ಸೇವೆಗಳನ್ನು ಒದಗಿಸಲು ಇರುವ ಕ್ಲಿಷ್ಟ ಪರಿಸ್ಥಿತಿಗಳು ಒಳಗೊಂಡಿವೆ.

“ಹಿಮಾಚಲ ಪ್ರದೇಶವು ತನ್ನ ನೈಸರ್ಗಿಕ ಪರಂಪರೆಯನ್ನು ಸಂರಕ್ಷಿಸಿಕೊಂಡು ಗ್ರಾಮೀಣ ಪ್ರದೇಶದಲ್ಲಿ ಉತ್ಪಾದಕತೆಯನ್ನು ಹೆಚ್ಚಿಸುವಲ್ಲಿ ನಿರಂತರ ಬದ್ಧತೆಯನ್ನು ಪ್ರತರ್ಶಿಸಿದೆ” ಎನ್ನುತ್ತಾರೆ ಮೈಕೆಲ್ ಕಾರ್ಟರ್, ವಿಶ್ವಬ್ಯಾಂಕ್‌ನ ಭಾರತ ದೇಶದ ಸ್ಥಾನಿಕ ನಿರ್ದೇಶಕರು. “ಈ ಪ್ರಕ್ರಿಯೆಯು ರಾಜ್ಯಾದ್ಯಂತ ಇರುವ ಬಡಜನರಿಗೆ ಜೀವನ ನಿರ್ವಹಣೆಗೆ ಉತ್ತಮ ಅವಕಾಶಗಳನ್ನು ಸೃಷ್ಟಿಸುವುದರ ಜೊತೆಗೆ, ಜಲಾನಯನ ಪ್ರದೇಶಗಳ ಉತ್ತಮ ನಿರ್ವಹಣೆಗೆ ನಿಯಮಗಳು ಹಾಗೂ ಸಾಂಸ್ಥಿಕ ಅಭಿವೃದ್ಧಿಗೆ ಬೆಂಬಲ ನೀಡುತ್ತದೆ.”

ಈ ಕೆಳಗಿನ ನಾಲ್ಕು ಅಂಗಗಳ ಆಧಾರದಲ್ಲಿ ಯೋಜನೆಯನ್ನು ವಿನ್ಯಾಸಗೊಳಿಸಲಾಗಿದೆ :

- ಸಾಂಸ್ಥಿಕ ಬಲವರ್ಧನೆ: ಸಹಭಾಗಿತ್ವ, ಪಾರದರ್ಶಕತೆ, ಹಾಗೂ ಬೇಡಿಕೆ–ಆಧಾರಿತ ರೀತಿಯಲ್ಲಿ ಪರಿಣಾಮಕಾರಿಯಾಗಿ ಜಲಾನಯನ ಪ್ರದೇಶಗಳನ್ನು ನಿರ್ವಹಿಸಲು ಸಾಧ್ಯವಾಗುವಂತೆ ಸಮುದಾಯಗಳ ಹಾಗೂ ಸ್ಥಳೀಯ ರಾಜ್ಯಾಡಳಿತಗಳ ಸಾಮರ್ಥ್ಯ ವರ್ಧನೆ.
- ಜಲಾನಯನ ಪ್ರದೇಶ ಅಭಿವೃದ್ಧಿ ಹಾಗೂ ನಿರ್ವಹಣೆ : ಮಣ್ಣು ಹಾಗೂ ನೀರು ಸಂರಕ್ಷಣೆ, ಕೃಷಿಯೋಗ್ಯವಲ್ಲದ ಭೂಪ್ರದೇಶಗಳ ಅಭಿವೃದ್ಧಿ, ಬೆಳೆ ಹಾಗೂ ಜಾನುವಾರು ಉತ್ಪಾದನೆ, ಹಾಗೂ ಗ್ರಾಮೀಣ ಪ್ರದೇಶ ಮೂಲಸೌಕರ್ಯ ಅಭಿವೃದ್ಧಿ ಇವುಗಳಿಗೆ ಧನಸಹಾಯ.
- ಗುಡ್ಡಗಾಡು ಜನಜೀವನ ಅಭಿವೃದ್ಧಿ: ಕೃಷಿ ಹಾಗೂ ಉತ್ಪಾದಕ ಚಟುವಟಿಕೆಗಳಲ್ಲಿ ಮೌಲ್ಯವರ್ಧನೆಗೆ ಪ್ರೋತ್ಸಾಹ, ಪ್ರತ್ಯೇಕವಾಗಿ ಗುಡ್ಡಗಾಡು ಜನತೆ ಹಾಗೂ ಬಡ ವರ್ಗ ಗಳಿಗೆ.
- ಯೋಜನಾ ಸಮನ್ವಯತೆ: ವಿಕೇಂದ್ರಿತ ಯೋಜನಾ ರಚನೆಗೆ ಬೆಂಬಲ

ಈ ಯೋಜನೆಯು ಸೆಪ್ಟಂಬರ್ 30, 2005ರಂದು ಕೊನೆಗೊಂಡ ಸಮಗ್ರ ಜಲಾನಯನ ಅಭಿವೃದ್ಧಿ ಯೋಜನೆ(ಐಡಬ್ಲ್ಯುಡಿಪಿ)ಯ ಯಶಸ್ವಿನ ಅನುಭವದ ಆಧಾರದಲ್ಲಿ ಕಾರ್ಯನಿರ್ವಹಿಸುತ್ತದೆ.

“ಸಮುದಾಯಗಳು ಹಾಗೂ ಸ್ಥಳೀಯ ರಾಜ್ಯಾಡಳಿತ ಎರಡನ್ನೂ ಭಾಗಿಯಾಗಿಸಿಕೊಂಡು ಸಹಭಾಗಿತ್ವ ವಿಧಾನದಲ್ಲಿ, ಹಿಮಾಚಲ ಪ್ರದೇಶದ ಉನ್ನತ ಪ್ರದೇಶಗಳಲ್ಲಿ ಐಡಬ್ಲ್ಯುಡಿಪಿಯ ಅನುಭವಗಳನ್ನು ಹೆಚ್ಚಿಸುವ ಗುರಿಯನ್ನು ಈ ಯೋಜನೆಯು ಹೊಂದಿದೆ. ಈ ಯೋಜನೆಯ ಮುಖಾಂತರ, ಪರಿಸರದಲ್ಲಿ ಅಭಿವೃದ್ಧಿ ಹಾಗೂ ಗ್ರಾಮೀಣ ಬಡ ಜನತೆಯ ಆದಾಯದಲ್ಲಿ ಹೆಚ್ಚಳ ಎರಡನ್ನೂ ನಾವು ನಿರೀಕ್ಷಿಸುತ್ತೇವೆ.” ಎನ್ನುತ್ತಾರೆ ಡೇನಿಯೆಲ್ ಸೆಲ್ಲೆನ್, ವಿಶ್ವಬ್ಯಾಂಕಿನ ಹಿರಿಯ ಕೃಷಿ ಆರ್ಥಿಕ ತಜ್ಞ.

ಈ ಯೋಜನೆಯು 152,161 ಹೆಕ್ಟೇರ್ ಕೃಷಿ ಭೂಮಿ ಹಾಗೂ 119,867 ಹೆಕ್ಟೇರ್ ಕೃಷಿಯೋಗ್ಯವಲ್ಲದ ಭೂಪ್ರದೇಶಗಳಿಗೆ ಜಲಾನಯನ ಸಂರಕ್ಷಣೆ ಹಾಗೂ ಅಭಿವೃದ್ಧಿಯನ್ನು ಒದಗಿಸುತ್ತದೆ ಎಂದು ಐಡಬ್ಲುಡಿಪಿಯ ಆರ್ಥಿಕ ವಿಶ್ಲೇಷಣೆಯು ತೋರಿಸಿದೆ. ನೀರಿಂಗಿಸುವಿಕೆಯ ರಚನೆಗಳ ಬಳಕೆಯು ಯೋಜನಾ ಪ್ರದೇಶದ 13, 489 ಹೆಕ್ಟೇರ್ ಪ್ರದೇಶಕ್ಕೆ ಪರ್ಯಾಯ ಬೇಸಾಯ ವಿಧಾನವನ್ನು ಒದಗಿಸುತ್ತದೆ. ಇದಲ್ಲದೆ, 26,073 ಹೆಕ್ಟೇರ್ ಭೂಪ್ರದೇಶವು ಭೂಸವಕಳಿಗೆ ತುತ್ತಾಗುವುದರಿಂದ ಹಾಗೂ 7,265 ಹೆಕ್ಟೇರ್ ಬರಡು ಭೂಪ್ರದೇಶವನ್ನು ಪುನಃ ಉತ್ಪಾದಕ ಪ್ರದೇಶವಾಗುವಂತೆ ಜಲಾನಯನಪ್ರದೇಶ ಸಂರಕ್ಷಣೆಯು ಮಾಡಿದೆ.

ಅಂತರಾಷ್ಟ್ರೀಯ ಅಭಿವೃದ್ಧಿ ಸಂಘಟನೆ (ಐಡಿಎ), ವಿಶ್ವಬ್ಯಾಂಕಿನ ಅನುಮತಿಸುವ ಅಂಗಸಂಸ್ಥೆ, ಇದರಿಂದ ದೊರಕುವ ಸಾಲವು 40 ವರ್ಷಗಳ ಪಕ್ವತೆಯ ಅವಧಿಯನ್ನು ಹೊಂದಿದ್ದು, 10 ವರ್ಷಗಳ ಹೆಚ್ಚುವರಿ ಅವಧಿ ಕೂಡ ಹೊಂದಿರುತ್ತದೆ; ಸೇವಾ ಶುಲ್ಕವು ಶೇಕಡ 0.75 ಆಗಿರುತ್ತದೆ.

ಭಾರತದಲ್ಲಿ ವಿಶ್ವ ಬ್ಯಾಂಕಿನ ಚಟುವಟಿಕೆಗಳ ಕುರಿತು ಹೆಚ್ಚಿನ ಮಾಹಿತಿಗಾಗಿ, ಭೇಟಿ ಕೊಡಿ: www.worldbank.org/in

ಯೋಜನೆಯ ಮಾಹಿತಿಗಳಿಗೆ, ಭೇಟಿ ಕೊಡಿ:
http://web.worldbank.org/external/projects/main?pagePK=64283627&piPK=64290415&theSitePK=40941&menuPK=228424&Projectid=P093720